ಊರಲ್ಲಿ ಮೂಲೆಮನೆ ಸಾವಿತ್ರಿಯ ಮಗನ ಉಪನಯನದ ತಯಾರಿ ಭರ್ಜರಿಯಾಗಿ ನಡೆದಿತ್ತು. ದೊಡ್ಡ ಚಪ್ಪರ ಹಾಕಿದ್ದಾರೆ, ಮೂರ್ನಾಲ್ಕು ದಿನಗಳಿಂದ ಅದೇ ಕೆಲಸ ಎಂದು ಕೊಟ್ಟಿಗೆಯ ಸಗಣಿ ತೆಗೆಯಲು ಬಂದ ಮಂಜ ಹೇಳಿದ್ದ. ಸುಮಾರು ದಿನಗಳಿಂದ ಹೊರಗೆಲ್ಲಿಗೂ ಹೋಗದೇ ಸೀತಾಲಕ್ಷ್ಮಿಗೂ ಬೇಸರವಾಗಿತ್ತು. ಒಂದಿನ ನಾಂದಿ, ಮರುದಿನ ಉಪನಯನ, ನಂತರ ದಂಟೋರ್ತ್ನೆ ಹೀಗೆ ಮೂರು ದಿನ ಹೋಗಬಹುದು ಎಂದು ಮನಸ್ಸಿನಲ್ಲೇ ಎಣಿಸಿದ ಸೀತಾಲಕ್ಷ್ಮಿ ಕಪಾಟಿನಲ್ಲಿದ್ದ ಸೀರೆಗಳಿಗೆ ಬ್ಲೌಸು ಲಂಗಗಳನ್ನೂ ಜೋಡಿಸಿಟ್ಟುಕೊಂಡಿದ್ದಳು. ಮುಂಚೆ ವಿಶೇಷವಾಗಿ ಆಹ್ವಾನ ಬರದಿದ್ದರೂ ನಾಂದಿಯ ದಿನ ಊರು ಕರೆಯುವ ಸಂಪ್ರದಾಯ ಇದೆಯಲ್ಲ, ಅದಕ್ಕೆ ಬಂದವರು ತಮ್ಮ ಮನೆಗೂ ಬರುತ್ತಾರೆ, ಅಷ್ಟು ಕರೆಯ ಸಿಕ್ಕರೆ ಸಾಕು ಹೋಗಲಿಕ್ಕೆ ಎಂದು ಸ್ನಾನಕ್ಕೂ ಹೋಗದೇ ಅಡುಗೆಯನ್ನೂ ಮಾಡದೇ ರಸ್ತೆಯನ್ನೇ ನೋಡುತ್ತಿದ್ದಳು. ಮಧ್ಯಾಹ್ನ ಹನ್ನೆರಡರ ಹೊತ್ತಿಗೆ ಝಗಮಗ ರೇಷಿಮೆ ಸೀರೆ, ಪಂಚೆಗಳನ್ನುಟ್ಟಿದ್ದ ಊರು ಕರೆಯುವ ಗುಂಪು ಬಂದರೂ ಇವರ ಮನೆಗೆ ಬರದೇ ಸೀತಾಲಕ್ಷ್ಮಿ ನೋಡುತ್ತಿದ್ದಂತೆ ದಾಟಿಕೊಂಡು ಮುಂದಿನ ಮನೆಗೆ ಹೋಯಿತು. ಅಲ್ಲಿಗೆ ಬರೀ ವೈದಿಕ, ಶ್ರಾದ್ಧಗಳಿಗಷ್ಟೇ ತಮ್ಮನ್ನು ಕರೆಯದೆ ದೂರ ಇಟ್ಟಿದ್ದಾರೆ, ಬೇರೆ ಸಮಾರಂಭಗಳಿಗೆ ಕರೆದೇ ಕರೆಯುತ್ತಾರೆ ಎಂದುಕೊಂಡಿದ್ದ ನಂಬಿಕೆ ಸುಳ್ಳಾಯಿತು. ಊರವರು ಅವರ ಮನೆಗೆ ತಾವೂ ಹೋಗದೆ, ತಮ್ಮ ಮನೆಯ ಸಭೆ ಸಮಾರಂಭಗಳಿಗೆ ಅವರನ್ನೂ ಕರೆಯದೆ ಅವರೊಂದಿಗೆ ಎಲ್ಲಾ ರೀತಿಯ ವ್ಯವಹಾರಗಳನ್ನೂ ಬಹಿಷ್ಕರಿಸಿದ್ದರು! ಉಪನಯನದ ನಂತರ ದೊಡ್ಡಮನೆಯಲ್ಲಾದ ಮದುವೆಗೂ ಚಿದಂಬರ ಭಟ್ಟರು, ಸೀತಾಲಕ್ಷ್ಮಿಯನ್ನು ಕರೆಯಲಿಲ್ಲ. ಜೀವನದುದ್ದಕ್ಕೂ ಇಸ್ಪೀಟ್ ಆಡಿಯೇ ಕಾಲಕಳೆದಿದ್ದ ಚಿದಂಬರಭಟ್ಟರಿಗೆ ಇಸ್ಪೀಟ್ ಇಲ್ಲದೆ ದಿನ ಕಳೆಯುವುದು ದುಸ್ತರವೆನಿಸಿತು. 'ಒಂದು ವಾರ ಹದಿನೈದು ದಿನಗಳೇನೋ ಮದುವೆ ಅದೂ ಇದೂ ಕಾರ್ಯಕ್ರಮ ಅಂಥ ಯಾರಿಗೂ ಬಿಡುವಿರಲಿಲ್ಲ, ಅದ್ಕೆ ಬಂದಿಲ್ಲ, ಈ ವಾರ ಬರ್ತಾರೆ ಸೀತಾ, ಚಪ್ಪರದಲ್ಲಿ ಹೀರೆಕಾಯಿ ಇದೆಯಲ್ಲ, ಬಿಸಿಬಿಸಿ ಬೋಂಡಾ, ಚಾ ಮಾಡು' ಎಂದು ಆಜ್ಞೆಯಿತ್ತರು. 'ಬರ್ತೀರಲ್ಲಾ ಬನ್ನಿ ಬನ್ನಿ' ಅಂಥ ಮತ್ತೆ ಮತ್ತೆ ಫೋನಾಯಿಸಿದರು. ಅಲ್ಲಿನ ಮಾತುಕತೆಯಲ್ಲಿ ಭಟ್ಟರಿಗೆ ಬೇರೊಬ್ಬರ ಮನೆಯಲ್ಲಿ ಇಸ್ಪೀಟ್ ಮಂಡಲ ನಡೆಯುತ್ತಿರುವ, ಬಹುತೇಕರು ಅಲ್ಲಿಗೆ ಹೋಗುತ್ತಿರುವ ವಾಸನೆ ಸಿಕ್ಕಿ ಕಳವಳಗೊಂಡರು.

ಬದುಕಿನ ಕೊನೆಗಾಲದಲ್ಲಿ ಇಸ್ಪೀಟಿನ ಗಮ್ಮತ್ತಿಲ್ಲದೆ ಚಿದಂಬರ ಭಟ್ಟರು ಮಂಕಾದರೆ ಊರಿನ ಜನರ, ಮದ್ವೆ ಅದೂ ಇದೂ ಸಮಾರಂಭಗಳ ಸಂಪರ್ಕವಿಲ್ಲದೆ ಸೀತಾಲಕ್ಷ್ಮಿ ಕಂಗಾಲಾದಳು! ಸಮುದಾಯದಲ್ಲಿದ್ದೂ ಬೆರೆಯುವುದಕ್ಕೆ ಆಸ್ಪದವಿಲ್ಲದೆ ಒಂಟಿತನವನ್ನನುಭವಿಸುವ ಶಿಕ್ಷೆಗೆ ದಂಪತಿಗಳಿಬ್ಬರೂ ಹೈರಾಣಾಗಿದ್ದರು. ಅಂದು ಹೋದ ವಿಶ್ವನಾಥ ಮನೆ ಕಡೆ ಮುಖ ಹಾಕಿರಲಿಲ್ಲ. ಪಟ್ಟಣದಲ್ಲಿ ಪಾನಿಪೂರಿ ಅಂಗಡಿ ಇಟ್ಟು ಜೀವನ ನಡೆಸುತ್ತಿದ್ದಾನೆ ಎಂದು ಕಾಲೇಜಿಗೆ ಹೋಗಿ ಬಂದು ಮಾಡುವ ಹುಡುಗರಿಂದ ಸುದ್ದಿ ಕಿವಿಗೆ ಬಿದ್ದಿತ್ತು. ಭಟ್ಟರು ಅವನ ಬಗ್ಗೆ ಮಾತೆತ್ತುತ್ತಿರಲಿಲ್ಲ, ಸೀತಾಲಕ್ಷ್ಮಿಯೂ ಎದೆಯನ್ನು ಕಲ್ಲಾಗಿಸಿಕೊಂಡು ಸುಮ್ಮನಿರುವುದನ್ನು ರೂಢಿಸಿಕೊಂಡಿದ್ದಳು. ಅದೇ ಶನಿವಾರ ಸಂಜೆ ಜಗುಲಿಯಲ್ಲಿ ಆರಾಮ ಕುರ್ಚಿಯಲ್ಲಿ ಕುಳಿತು ಇಸ್ಪೀಟ್ ಆಟಕ್ಕೆ ಜನರನ್ನು ಕಾಯುವಂತೆ ಕುಳಿತಿದ್ದ ಭಟ್ಟರನ್ನು ಚಾ ಕುಡಿಯುವುದಕ್ಕೆ ಸೀತಾಲಕ್ಷ್ಮಿ ಎಷ್ಟು ಕರೆದರೂ ಹೂಂಗುಡಲಿಲ್ಲ. ಸೀತಾಲಕ್ಷ್ಮಿ ಒಳಗಿನಿಂದ ಬಂದು ನೋಡಿದರೆ ಭಟ್ಟರಿಗೆ ಜ್ಞಾನವಿರಲಿಲ್ಲ, ಮೈ ಮುಟ್ಟಿ ಎಚ್ಚರಿಸಲು ನೋಡಿದಾಗ ಕೈಯ್ಯಲ್ಲಿದ್ದ ಇಸ್ಪೀಟ್ ಎಲೆಗಳು ನೆಲಕ್ಕೆ ಬಿದ್ದವು.

ಬದುಕಿದ್ದಾಗ ಹತ್ತಿರ ಸೇರಿಸದ ಊರಮಂದಿ ಚಿದಂಬರ ಭಟ್ಟರು ಹೋದರೆಂಬ ಸುದ್ದಿ ಕೇಳಿ ಅಂತಿಮದರ್ಶನಕ್ಕೆ ಒಬ್ಬೊಬ್ಬರಾಗಿಯೇ ಬಂದರು. ಪರ ಊರುಗಳ ಇಸ್ಪೀಟಾಟದ ಜೊತೆಗಾರರೂ ಧಾವಿಸಿ ಬಂದು ಕಂಬನಿ ಮಿಡಿದರು. ಬಂದಿದ್ದ ಜನ ಸಮೂಹವನ್ನು ನೋಡಿ ಸೀತಾಲಕ್ಷ್ಮಿಗೆ ನಿಜವಾಗಿಯೂ ಗೊಂದಲವಾಯಿತು. ಇಷ್ಟು ದಿನ ಯಾರೂ ತಮ್ಮನ್ನು ಹತ್ತಿರ ಸೇರಿಸದೆ ದೂರ ಇಟ್ಟಿದ್ದೇ ಸುಳ್ಳೇನೋ ಎನ್ನುವ ಭ್ರಮೆ ಆವರಿಸಿತು ಆ ಕ್ಷಣಕ್ಕೆ. ಚಿದಂಬರ ಭಟ್ಟರ ಹಿರಿಯ ಹೆಂಡತಿಯ ಮೂವರು ಮಕ್ಕಳು ಸೊಸೆಯಂದಿರು ಬಂದು, ಜನರನ್ನು ನಿಭಾಯಿಸುತ್ತಿದ್ದರು. ಸೀತಾಲಕ್ಷ್ಮಿಯ ಕಣ್ಣು ವಿಶ್ವನಾಥನನ್ನು ಹುಡುಕುತಿತ್ತು.